**ಓಎಸ್ ನಂಃ 21/2020**
**ಪಿಡಬ್ಲೂಃ1**

**<u>ಸಾಕ್ಷಿಗೆ ದಿನಾಂಕ 26-03-2026 ರಂದು ಕರೆಯಿಸಿ ಪ್ರಮಾಣ ವಚನ  ಬೋಧಿಸಲಾಯಿತು</u>**

<u>ಪಾಟೀ ಸವಾಲುಃ 2ನೇ ಪ್ರತಿವಾದಿ ಪರ ಶ್ರೀ ಎನ್.ಎಸ್.ಪಿ.  ವಕೀಲರಿಂದ</u>

ಕೆ.ಎನ್.ಎನ್.ಎಲ್ ಕಛೇರಿಗೆ ನಿಮ್ಮ ತಾಯಿ ಗೌರಮ್ಮ ಇವರು ಒಂದು ಅರ್ಜಿ ಕೊಟ್ಟಿದ್ದರು ಎಂದರೆ ಸರಿ.  ನನಗೆ ಸದರಿ ಅರ್ಜಿಯ ದಿನಾಂಕ ಗೊತ್ತಿಲ್ಲ.  ಶಿವಯೋಗಿ ನನ್ನ ತಂದೆ.  ನನ್ನ ತಂದೆಗೆ ಕೆ.ಎನ್.ಎನ್.ಎಲ್. ಕಛೇರಿಯಲ್ಲಿ ಎಂದು ಕೆಲಸಕ್ಕೆ ಸೇರಿದ್ದರು ಎಂದು ನನಗೆ ಮಾಹಿತಿ ಇಲ್ಲ.  ಶಿವಯೋಗಿ ರವರು ಕೆಲಸಕ್ಕೆ ಸೇರಿದಾಗ ಅವರ ಸೇವಾ-ಪುಸ್ತಕವನ್ನು ತೆರೆಯಲಾಗಿದ್ದು, ಅದರ ದಿನಾಂಕ: 11-07-2011ರಂದು ಶಿವಯೋಗಿ ರವರು ತನ್ನ ಹೆಂಡತಿಯ ಹೆಸರು ಲೀಲಾವತಿ ಎಂದು ಸೇರ್ಪಡೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ: 04-01-2016ರಂದು ಶಿವಯೋಗಿ ರವರು ಮತ್ತೊಂದು ಅರ್ಜಿ ನೀಡಿ ವಾದಿಯರು ತನ್ನ ಹೆಂಡತಿ ಮತ್ತು ಮಕ್ಕಳು ಎಂದು ಅವರು ಸೇವಾ ಪುಸ್ತಕದಲ್ಲಿ ಸೇರ್ಪಡೆ ಮಾಡಲು ಅರ್ಜಿ ನೀಡಿದ್ದರು ಎಂದರೆ ಸರಿ.  ಸದರಿ ಅರ್ಜಿಯ ಕುರಿತು 2ನೇ ಪ್ರತಿವಾದಿಯ ಕಛೇರಿಯವರು ಸೇವಾ ಪುಸ್ತಕದಲ್ಲಿ ವಾದಿಯರ ಹೆಸರುಗಳನ್ನು ಸೇರಿಸಲು ಬರುವುದಿಲ್ಲ ಎಂದು ಉತ್ತರ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2018ರಲ್ಲಿ ಶಿವಯೋಗಿ ತೀರಿಕೊಂಡ ನಂತರ ನೀವು ಮತ್ತು 1ನೇ ಪ್ರತಿವಾದಿ ಒಂದು ಒಪ್ಪಂದ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ.  ಸಾಕ್ಷಿಗೆ ಈಗ ನಿಶಾನೆ ಡಿ-1 ಒಪ್ಪಿಗೆ ಪತ್ರವನ್ನು ತೋರಿಸಲು ಅದರಲ್ಲಿ ತನ್ನ ತಾಯಿಯ ಭಾವಚಿತ್ರ ಇದೆ ಎಂದು ಗುರುತಿಸಿದ್ದು 1ನೇ ಪ್ರತಿವಾದಿಯ ಸಾಕ್ಷಿ ಗುರುತಿಸಿದ ಭಾವಚಿತ್ರವನ್ನು ನಿಶಾನೆ ಡಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಶಾನೆ ಡಿ-1ರಲ್ಲಿರುವ ತನ್ನ ಸಹಿಯನ್ನು ಸಹ ಗುರುತಿಸಿದ ಕಾರಣ, ಸದರಿ ಸಹಿಯನ್ನು ನಿಶಾನೆ ಡಿ-1(ಬಿ) ಎಂದು ಗುರುತಿಸಲಾಯಿತು. ನಿಶಾನೆ ಡಿ-1ಕ್ಕೆ 3 ಮತ್ತು 4ನೇ ವಾದಿಯರು ಸಹ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.  ಸದರಿ ಒಪ್ಪಿಗೆ ಪತ್ರದಲ್ಲಿ ನೀವು ಒಪ್ಪಂದ ಮಾಡಿಕೊಂಡು 1ನೇ ಪ್ರತಿವಾದಿಗೆ ಪಿಂಚಣಿ ಮತ್ತು ಮೃತ ಶಿವಯೋಗಿ ರವರ ಅನುಕಂಪದ ನೌಕರಿಯನ್ನು ನೀವು ಪಡೆಯಬೇಕು ಎಂದು ಒಪ್ಪಂದ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಸದರಿ ಒಪ್ಪಂದದ ಪ್ರಕಾರ ಅನುಕಂಪದ ನೌಕರಿಗಾಗಿ ನೀವು ಅರ್ಜಿ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ ನಾನು ಅರ್ಜಿ ಸಲ್ಲಿಸಿದ್ದು ನಿಜ, ಆದರೆ ಅದು ಒಪ್ಪಂದದ ಪ್ರಕಾರ ಇರಲಿಲ್ಲ ಎಂದು ನುಡಿಯುತ್ತಾರೆ.  ನೀವು ನಿಮ್ಮ

ಅರ್ಜಿಯೊಂದಿಗೆ ನಿಮ್ಮ ದಾಖಲಾತಿಗಳನ್ನು ಸಹ 2ನೇ ಪ್ರತಿವಾದಿ ಇಲಾಖೆಗೆ ನೀಡಿದ್ದೀರಿ ಎಂದರೆ ಸರಿ. ನಿಮ್ಮ ಅರ್ಜಿಯೊಂದಿಗೆ ಮತ್ತೊಂದು ಒಪ್ಪಿಗೆ ಪತ್ರವನ್ನು ನೀವು ಹಾಜರುಪಡಿಸಿದ್ದು, ಅದರಲ್ಲಿ 1, 3 ಮತ್ತು 4ನೇ ವಾದಿಯರು, 1ನೇ ಪ್ರತಿವಾದಿ ಕುಟುಂಬದವರು ನಿಮಗೆ ಅನುಕಂಪದ ನೌಕರಿಗಾಗಿ ಸಮ್ಮತಿ ಪತ್ರಗಳನ್ನು ನೀಡಿದ್ದಾರೆ ಎಂದರೆ ಸಾಕ್ಷಿ 1, 3 ಮತ್ತು 4ನೇ ವಾದಿಯರು ಮಾತ್ರ ನೀಡಿದ್ದಾರೆ ಎಂದು ನುಡಿಯುತ್ತಾರೆ.

ನೀವು ಅರ್ಜಿ ಸಲ್ಲಿಸಿದ ನಂತರ ಪೊಲೀಸರು ವೆರಿಫಿಕೇಷನ್ ಮಾಡಿದ್ದಾರೆ ಎಂದರೆ ಸರಿ. ಮೃತ ಶಿವಯೋಗಿ ರವರು 2ನೇ ಪ್ರತಿವಾದಿ ಇಲಾಖೆಗೆ ನೀಡಿರುವ ಅರ್ಜಿಗಳ ಪ್ರಕಾರ 1ನೇ ಪ್ರತಿವಾದಿಯೇ ಅವರ ಮೊದಲ ಹೆಂಡತಿ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಆದೇಶ ಆದ ಕಾರಣ, ನಿಮಗೆ ಅನುಕಂಪದ ನೌಕರಿ ಇನ್ನೂ ವರೆಗೆ ಸಿಕ್ಕಿಲ್ಲ ಮತ್ತು ಪಿಂಚಣಿ ಸಹ 1ನೇ ಪ್ರತಿವಾದಿಗೆ ಬಂದಿಲ್ಲ ಎಂದರೆ ಸರಿ.

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.